CONGRESS

"ಕಳೆದ ಕೆಲವು ವರ್ಷಗಳಲ್ಲಿ ನಮ್ಮ ಸಮಾಜದ ಅನೇಕ ವರ್ಗದವರು ಸಮೃದ್ಧಿಯಿಂದ ಪ್ರಯೋಜನ ಪಡೆದಿದ್ದಾರೆ. ಆದರೆ, ನಮ್ಮ ಮುಂದಿರುವ ಪ್ರಶ್ನೆಯೆಂದರೆ ಅದೃಷ್ಟಶಾಲಿಯಾಗಿಲ್ಲದ ಮತ್ತು ಈ ಸಮೃದ್ಧಿಯಿಂದ ವಂಚಿತರಾಗಿರುವ ಸಮಾಜದ ಅಂತಹ ವರ್ಗದ ಜನರು. ನಮ್ಮ ಮುಂದೆ ಈಗಿರುವ ದೊಡ್ಡ ಸವಾಲು - ತಮ್ಮ ಯಾವುದೇ ತಪ್ಪಿಲ್ಲದಿದ್ದರೂ ಹಸಿವೆ ಮತ್ತು ಅಪೌಷ್ಟಿಕತೆಯಿಂದ ನರಳುತ್ತಿರುವ ಅಂತಹ ಜನರತ್ತ ನಮ್ಮ ಜವಾಬ್ದಾರಿಗಳೇನು?'

ಆಹಾರ ಸುಭದ್ರತೆಯನ್ನು ಒದಗಿಸುವುದಕ್ಕಾಗಿ ನಮ್ಮಲ್ಲಿ ಸಾಧನೆಗಳಿವೆಯೇ ಎಂದು ಕೆಲವು ಜನರು ನಮ್ಮನ್ನು ಪ್ರಶ್ನಿಸಿದ್ದಾರೆ. ಅವರಿಗೆ ನಾನು ಏನನ್ನು ಹೇಳಲು ಬಯಸುತ್ತೇನೆ ಎಂದರೆ ಸಾಧನೆಯಿಲ್ಲ ಎನ್ನುವುದು ಮುಖ್ಯವಲ್ಲ, ಅವುಗಳನ್ನು ನಾವು ಏರ್ಪಾಡು ಮಾಡಬೇಕು. ನಮ್ಮಿಂದ ಸಾಧ್ಯವಿದೆಯೇ ಅಥವಾ ಇಲ್ಲವೇ ಎನ್ನುವುದು ಪ್ರಶ್ನೆಯಲ್ಲ, ನಾವು ಅದನ್ನು ಮಾಡಲೇ ಬೇಕು.'

'ಹಕ್ಕುಗಳನ್ನು ಆಧಾರಿಸಿದ ವಿಧಾನ' ತತ್ವಗಳೊಂದಿಗೆ ಮುನ್ನಡೆಯುವುದೇ ಇದರ ಉದ್ದೇಶವಾಗಿದೆ. ಇದು ನಮ್ಮ ಜನರಿಗೆ ಕಾನೂನುಬದ್ಧ ಅಧಿಕಾರಗಳನ್ನು ಒದಗಿಸುತ್ತದೆ, ಹೆಚ್ಚು ಸ್ಪಂದನಾತ್ಮಕ, ಜವಾಬ್ದಾರಿಯುತ ಮತ್ತು ಹೊಣೆಗಾರಿಕೆ ಹೊಂದಿರುವಂತಿರಬೇಕು ಎಂದು ಕಾರ್ಯಾಂಗಕ್ಕೆ ಒತ್ತಡವನ್ನು ಹೇರುತ್ತದೆ ಹಾಗೂ ದೂರುಗಳಿಗೆ ಪರಿಹಾರ ಕಂಡುಕೊಳ್ಳುವುದಕ್ಕಾಗಿ ಸೂಕ್ತವಾದ ತಂತ್ರೋಪಾಯಗಳನ್ನು ಒದಗಿಸುತ್ತದೆ. ನಮ್ಮ ದೇಶದಲ್ಲಿ ಸಶಕ್ತಗೊಳಿಸುವಿಕೆಯ ಕ್ರಾಂತಿಯನ್ನು ತರುವುದೇ ಈ ವಿಧಾನವಾಗಿದೆ ಎಂದು ನಾನು ನಂಬಿದ್ದೇನೆ - ಇದರ ಬಗ್ಗೆ ನನಗೆ ಹೆಮ್ಮೆ ಇದೆ"

- ಶ್ರೀಮತಿ. ಸೋನಿಯಾ ಗಾಂಧಿ

Kannada

ಇದು ನಿಮಗೆ ಗೊತ್ತೆ?

82 ಕೋಟಿ ಜನರು ಭಾರತದಲ್ಲಿ ಅಗ್ಗದ ಆಹಾರಗಳನ್ನು ಪಡೆಯಲಿದ್ದಾರೆ!

ರೂ. 3 ಕ್ಕೆ ಪ್ರತಿ ಕಿಲೋದಂತೆ ಅಕ್ಕಿ, ಗೋಧಿ ರೂ. 2 ಪ್ರತಿ ಕಿಲೋ ಮತ್ತು ದವಸ ಧಾನ್ಯಗಳು ರೂ. 1 ಪ್ರತಿ ಕಿಲೋದಂತೆ ಅತ್ಯಂತ ಸಬ್ಸಿಡಿ ದರಗಳಲ್ಲಿ ಈ ಜನರು ಪ್ರತಿ ವ್ಯಕ್ತಿಗೆ ಪ್ರತಿ ತಿಂಗಳಿಗೆ 5 ಕಿಲೋದಂತೆ ಆಹಾರ ಧಾನ್ಯಗಳನ್ನು ಪಡೆಯಲಿದ್ದಾರೆ!!

ಜನರಿಗೆ ಸಬ್ಸಿಡಿ ದರದಲ್ಲಿ ಆಹಾರ ಧಾನ್ಯಗಳನ್ನು ನೀಡುವುದಕ್ಕಾಗಿ ಪ್ರತಿ ವರ್ಷ ಸುಮಾರು ರೂ. 1,25,000 ಕೋಟಿಗಳಷ್ಟನ್ನು ವ್ಯಯಿಸಲಾಗುತ್ತದೆ!!!

ಇದನ್ನು ಸಾಧ್ಯಗೊಳಿಸಿರುವುದಕ್ಕೆ ಕಾರಣಗಳು

- ಪ್ರತಿಯೊಬ್ಬ ವ್ಯಕ್ತಿಗೂ ಜೀವಿಸಬೇಕೆನ್ನುವ ಮೂಲಭೂತ ಹಕ್ಕು ಇದೆ ಮತ್ತು ಆಹಾರದ ಹಕ್ಕು ಒದಗಿಸದ ಹೊರತು ಇದನ್ನು ಪೂರ್ತಿಗೊಳಿಸಲು ಸಾಧ್ಯವಿಲ್ಲ ಎಂದು ಕಾಂಗ್ರೆಸ್ ಪಕ್ಷ ಕೈಗೊಂಡಿರುವ ನೀತಿ-ಧೋರಣೆ
- ಕೇವಲ ಬಡತನದ ಕಾರಣದಿಂದಾಗಿ ಯಾರೇ ವ್ಯಕ್ತಿ ಹಸಿದುಕೊಂಡು ರಾತ್ರಿ ಮಲಗಬಾರದು ಎಂದು ಕಾಂಗ್ರೆಸ್ ಪಕ್ಷ ಇಟ್ಟಿರುವ ನಂಬಿಕೆ
- ಆಹಾರ ಸುಭದ್ರತೆ ಕಾಯಿದೆಯನ್ನು ಮಂಜೂರು ಮಾಡಿ ಅದನ್ನು ಜಾರಿಗೊಳಿಸಿರುವ ಯುಪಿಎ ಸರಕಾರದ ಪ್ರಬಲವಾದ ದೃಢ ಸಂಕಲ್ಪ

ಕಾಂಗ್ರೆಸ್ ಪಕ್ಷ ಸಮರ್ಪಿಸುತ್ತಿದೆ
ರಾಷ್ಟ್ರೀಯ ಆಹಾರ ಸುಭದ್ರತೆ ಕಾಯಿದೆ

- ನಗರ ಪ್ರದೇಶಗಳಲ್ಲಿರುವ ಶೇಕಡಾ 50 ರಷ್ಟು ಕುಟುಂಬಗಳು ಮತ್ತು ಗ್ರಾಮೀಣ ಭಾರತದಲ್ಲಿರುವ ಶೇಕಡಾ 75 ರಷ್ಟು ಕುಟುಂಬಗಳು ತಮ್ಮ ಅಧಿಕಾರದ ರೂಪದಲ್ಲಿ ಸಬ್ಸಿಡಿಗೊಳಿಸಿರುವ ಆಹಾರ ಧಾನ್ಯಗಳನ್ನು ಪಡೆಯುತ್ತಾರೆ
- ಅಂತ್ಯೋದಯ ಕುಟುಂಬಗಳು ಪ್ರತಿ ಕಿಲೋಗೆ 35 ರಂತೆ ಪ್ರತಿ ತಿಂಗಳು ಪಡೆಯುತ್ತಾರೆ ಮತ್ತು ಇತರ ಕುಟುಂಬಗಳು ಪ್ರತಿ ತಿಂಗಳಿಗೆ ಪ್ರತಿ ವ್ಯಕ್ತಿಯಂತೆ 5 ಕಿಲೋ ಆಹಾರ ಧಾನ್ಯಗಳನ್ನು ಪಡೆಯುತ್ತಾರೆ.
- ಮಕ್ಕಳು ವಯೋಮಾನ ಆಧಾರಿತ ಭೋಜನಗಳನ್ನು ಮತ್ತು ಪೋಷಕ ಆಹಾರಗಳನ್ನು ಪಡೆಯುತ್ತಾರೆ
- ಗರ್ಭಿಣಿ ಮಹಿಳೆಯರು ಬೇಯಿಸಿದ ಭೋಜನ ಮತ್ತು ಧವಸ ಧಾನ್ಯಗಳು ಹಾಗೂ ಜೊತೆಯಲ್ಲಿ ಮಗುವಿನ ಆರೈಕೆಗಾಗಿ ರೂ. 6,000/- ಪಡೆಯುತ್ತಾರೆ.
- ಕುಟುಂಬದಲ್ಲಿನ ಅತಿ ಹಿರಿಯ ಮಹಿಳೆಯ ಹೆಸರಿನಲ್ಲಿ ರೇಷನ್ ಕಾರ್ಡ್ ವಿತರಿಸಲಾಗುವುದು
- ಇದು ಮಾನವ ಇತಿಹಾಸದಲ್ಲೇ ಸರಿಸಾಟಿಯಿಲ್ಲದ ವಿಶ್ವದ ಅತಿ ದೊಡ್ಡ ಆಹಾರ ಸುಭದ್ರತೆ ಕಾರ್ಯಕ್ರಮವಾಗಿದೆ. ಸಂಪೂರ್ಣ ಪಾರದರ್ಶಕತೆಯೊಂದಿಗೆ ತಯಾರು ಮಾಡಿರುವ ಆಧಾರ್ ಕಾರ್ಡ್ ಮೇಲೆ ಸಂಪೂರ್ಣ ವ್ಯವಸ್ಥೆಯನ್ನು ನಿರ್ಮಿಸಲಾಗಿದೆ. ರಾಜ್ಯಗಳಲ್ಲಿ ಎರಡು-ಸ್ತರದ ದೂರು ಪರಿಹಾರ ಸಂರಚನೆಯಿರುತ್ತದೆ ಮತ್ತು ಎಲ್ಲಾ ದಾಖಲಾತಿಗಳನ್ನು ಸಾರ್ವಜನಿಕರಿಗಾಗಿ ಇರಿಸಲಾಗುತ್ತದೆ.
- ನಿಯತಕಾಲಿಕವಾಗಿ ಸಾಮಾಜಿಕ ಲೆಕ್ಕ ಪರಿಶೋಧನೆ ವ್ಯವಸ್ಥೆಗಳಿರುತ್ತವೆ ಮತ್ತು ಜಾಗೃತ ಸಮಿತಿಗಳಿರುತ್ತವೆ.

CONGRESS